ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 19-10-2016

# ಪತ್ರಿಕಾ ಆಮಂತ್ರಣ

1 ಪದಕ ಪ್ರಧಾನ ಸಮಾರಂಭ.

ಪದಕ ಪ್ರಧಾನ:
ಶ್ರೀ ವಜುಭಾಯಿ ರೂಡಾಭಾಯಿ ವಾಲ,
ರಾಜ್ಯಪಾಲರು, ಕರ್ನಾಟಕ ಸರ್ಕಾರ.

ಅಧ್ಯಕ್ಷತೆ:
ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ಮುಖ್ಯ ಅತಿಥಿ:
ಡಾ. ಜಿ. ಪರಮೇಶ್ವರ, ಗೃಹ ಸಚಿವರು.

ದಿನಾಂಕ: 20-10-2016 ಗುರುವಾರ ಬೆಳಿಗ್ಗೆ 10-30 ಗಂಟೆಗೆ
ಸ್ಥಳ: ಗಾಜಿನ ಮನೆ, ರಾಜಭವನ, ಬೆಂಗಳೂರು.

2. ನಮ್ಮ ಮೆಟ್ರೋ 5 ನೇ ವರ್ಷ ಬೆಂಗಳೂರು ಸಂತೆ ಸುಗಮ ಸಂಗೀತ ಕಾರ್ಯಕ್ರಮ
ಮುಖ್ಯ ಅತಿಥಿ: ಪ್ರದೀಪ್ ಸಿಂಗ್ ಖರೋಲ,
ವ್ಯವಸ್ಥಾಪಕ ನಿರ್ದೇಶಕರು, ಬಿ.ಎಂ.ಆರ್.ಸಿ.ಎಲ್.

ದಿನಾಂಕ: 20-10-2016 ಸಮಯ : ಸಂಜೆ 5-30 ಗಂಟೆಗೆ
ಸ್ಥಳ: ಸ್ವಾಮಿ ವಿವೇಕಾನಂದ ಮೆಟ್ರೋ ಸ್ಟೇಷನ್, ಬೆಂಗಳೂರು

## ಪತ್ರಿಕಾ ಪ್ರಕಟಣೆ

# ರಂಗಗೀತೆ ಗಾಯನ ಕಾರ್ಯಕ್ರಮ

**ಬೆಂಗಳೂರು ಅಕ್ಟೋಬರ್ 19 (ಕರ್ನಾಟಕ ವಾರ್ತೆ)**

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ಡಾ. ಬಿ. ಜಯಶ್ರೀ ಅವರಿಂದ 'ರಂಗಗೀತೆ ಗಾಯನ' ಕಾರ್ಯಕ್ರಮವನ್ನು ಅಕ್ಟೋಬರ್ 22 ರಂದು ಸಾಯಂಕಾಲ 6–00 ಗಂಟೆಗೆ ಏರ್ಪಡಿಸಲಾಗಿದೆ.

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಟ್ರಸ್ಟಿನ ಅಧ್ಯಕ್ಷ ಎಸ್. ಎಂ. ಕೃಷ್ಣ ಮತ್ತು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಡಾ. ಬಿ. ಎಲ್. ಶಂಕರ್ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

## ವಿವಿಧ ಯೋಜನೆಗಳ ಕಲ್ಯಾಣ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ

ಬೆಂಗಳೂರು ಅಕ್ಟೋಬರ್ 19 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯು ಅಕ್ಟೋಬರ್ 21 ರಂದು ಬೆಳಿಗ್ಗೆ 10.30 ಗಂಟೆಗೆ ರಾಮನಗರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸಭೆ ಸೇರಿ ರಾಮನಗರ ಜಿಲ್ಲೆಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಮುದಾಯದವರ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾಗಿರುವ ವಿವಿಧ ಯೋಜನೆಗಳ/ಕಲ್ಯಾಣ ಕಾರ್ಯಕ್ರಮಗಳ ಪ್ರಗತಿ ಕುರಿತು ಚರ್ಚಿಸಲಿದೆ.

## CORRIGENDUM

Bengaluru 19th October (Karnataka Information)

The services of Shri M.P. Mullai Muhilan, IAS Assistant Commissioner, Jamakhandi Sub-Division, Bagalkot District are placed at the disposal of Urban Development Department for being posted until further orders as Chief Executive Officer/Managing Director, Special Purpose Vehicle (SPV), Belagavi under Smart City Scheme.

The orders posting Shri M.P. Mullai Muhilan, IAS (KN-2013) Assistant Commissioner, Jamakhandi Sub-Division, Bagalkot District as Commissioner, Belagavi City Corporation, Belagavi vide

Government Notification of even number dated : 18-10-2016 are cancelled.

## ತಿದ್ದುಪಡಿ

**ಬೆಂಗಳೂರು, ಅಕ್ಟೋಬರ್ 19 ( ಕರ್ನಾಟಕ ವಾರ್ತೆ ) :**

ಶ್ರೀ ಎಂ.ಪಿ. ಮುಳ್ಳಯ್ ಮುಹಿಲಿಯಾನ್ ಸಹಾಯಕ ಆಯುಕ್ತರು, ಜಮಖಂಡಿ ಉಪ ವಿಭಾಗ, ಬಾಗಲಕೋಟೆ ಜಿಲ್ಲೆ ಇಲ್ಲಿಗೆ ವರ್ಗವಾಗಿದ್ದ ಆದೇಶವನ್ನು ತಿದ್ದುಪಡಿ ಮಾಡಿ ಶ್ರೀಯುತರಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ/ವ್ಯವಸ್ಥಾಪಕ ನಿರ್ದೇಶಕರು(ಸ್ಪೆಷಲ್ ಪರ್ಪೋಸ್ ವೆಹಿಕಲ್) (ಎಸ್‌ಪಿವಿ) ಬೆಳಗಾವಿ ಸ್ಮಾರ್ಟ್‌ಸಿಟಿ ಯೋಜನೆಗೆ ವರ್ಗಾವಣೆ ಮಾಡಲಾಗಿದೆ.

## ವಸ್ತುಪ್ರದರ್ಶನ/ಮಾರಾಟಮೇಳ

**ಬೆಂಗಳೂರು, ಅಕ್ಟೋಬರ್ 19 ( ಕರ್ನಾಟಕ ವಾರ್ತೆ ) :**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಸಹಯೋಗದೊಂದಿಗೆ ವಿಭಾಗೀಯ ಮಟ್ಟದ ಸ್ತ್ರೀ ಶಕ್ತಿ ತರಬೇತಿ ಕೇಂದ್ರ ಮಡಿವಾಳ, ಬೆಂಗಳೂರು ನಲ್ಲಿ ದಿನಾಂಕ: 21–10–2016 ರಿಂದ 23–10–2016 ರವರೆಗೆ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶ್ರೀಮತಿ ಉಮಾಶ್ರೀ ಅವರು ಉದ್ಘಾಟಿಸುವರು.

## ಕರ್ನಾಟಕ ರಾಜ್ಯ ಅಂತರ ಮಾಧ್ಯಮ ಪ್ರಚಾರ ಸಂಯೋಜನಾ ಸಮಿತಿ ಸಭೆ

**ಬೆಂಗಳೂರು, ಅಕ್ಟೋಬರ್ 19 ( ಕರ್ನಾಟಕ ವಾರ್ತೆ ) :**

ಕೇಂದ್ರ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ರಚಿಸಿರುವ ಅಂತರ್ ಮಾಧ್ಯಮ ಪ್ರಚಾರ ಸಂಯೋಜನಾ ಸಮಿತಿ ಮಾದರಿಯಲ್ಲಿಯೆ ರಾಜ್ಯ ಸರ್ಕಾರವು ಸರ್ಕಾರದ ಪ್ರಮುಖ ಯೋಜನೆಗಳಿಗೆ ವ್ಯಾಪಕ ಪ್ರಚಾರ ನೀಡುವ ದೃಷ್ಟಿಯಿಂದ ಸರ್ಕಾರದ ಇಲಾಖೆಗಳು/ನಿಗಮ ಮಂಡಳಿಗಳನ್ನೊಳಗೊಂಡ ಕರ್ನಾಟಕ ಅಂತರ ಮಾಧ್ಯಮ ಪ್ರಚಾರ ಸಂಯೋಜನಾ ಸಮಿತಿಯನ್ನು ರಚಿಸಿದ್ದು ಅದರ ಮೊದಲ ಸಭೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜರುಗಿತು.

ಸಭೆಯಲ್ಲಿ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳ ಮತ್ತು ನಿಗಮ ಮಂಡಳಿಗಳ ಉನ್ನತ ಅಧಿಕಾರಿಗಳು ಭಾಗಹಿಸಿದ್ದರು. ಸಮಿತಿಯ ಮುಖ್ಯ ಉದ್ದೇಶಗಳಾದ ಬಹುಮಾಧ್ಯಮಗಳ ಮೂಲಕ ಪ್ರಚಾರ ನೀಡಲು ಅನುಕೂಲಕರ ಅಂಶಗಳು, ವಿವಿಧ ಇಲಾಖೆ/ನಿಗಮ ಮಂಡಳಿಗಳ ನಡುವೆ ಸಂಯೋಜನೆ ಸಾಧಿಸುವುದು. ನಿಯಮಿತವಾಗಿ ತ್ರೈಮಾಸಿಕ ಸಭೆ ಸೇರಿ ಕಾರ್ಯ ಯೋಜನೆಗಳನ್ನು ರೂಪಿಸುವುದು

ಸೇರಿದಂತೆ ಮಾಧ್ಯಮಗಳು ಮತ್ತು ಸರ್ಕಾರದ ಎಲ್ಲ ಇಲಾಖೆಗಳ ನಡುವಿನ ಸಮನ್ವಯತೆಗಾಗಿ ಶ್ರಮಿಸುವುದರ ಬಗ್ಗೆ ಚರ್ಚಿಸಲಾಯಿತು.

ಸರ್ಕಾರದ ಎಲ್ಲ ಇಲಾಖೆ/ಮಂಡಳಿಗಳ ಪ್ರಚಾರ ಕಾರ್ಯಕ್ಕೆ ಸದರಿ ಸಮಿತಿಯನ್ನು ಬಳಸಿಕೊಂಡು ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ವ್ಯಾಪಕ ಪ್ರಚಾರ ಮಾಡಲು ಅನುಸರಿಸುವ ಮಾರ್ಗಗಳನ್ನು ಸಭೆಗೆ ವಿವರಿಸಲಾಯಿತು.